Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿಬಿಎಂಪಿ/ವಾ.22/ಜೆ.ಸಿ ಉ/ಪಿಆರ್/12/2020-21

ಸಹಾಯಕ ಅಭಿಯಂತರರ ಕಛೇರಿ
ಜೆ.ಸಿ ನಗರ ಉಪವಿಭಾಗ, ಪೂರ್ವ ವಲಯ
ವಿ. ನಾಗೇನಹಳ್ಳಿ, ವಾರ್ಡ್ ನಂ: 22
ಬೆಂಗಳೂರು 560032.
ದಿನಾಂಕ: 19/12/2020

## ದಿನಾಂಕ: 19-12-2020 ರಂದು ವಾರ್ಡ್ ಸಮಿತಿಯ ಸಭೆಯ ನಡವಳಿಗಳು:-

ಸಭೆಗೆ ಹಾಜರಿದ್ದವರು:

- ಶ್ರೀ. ರಾಮಕೃಷ್ಣರೆಡ್ಡಿ, ಕಾರ್ಯಪಾಲಕ ಅಭಿಯಂತರರು, ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ವಾರ್ಡ್ ಸಮಿತಿ.
- ಶ್ರೀ. ಗುರುಸಿದ್ದಪ್ಪ .ಜಿ ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ
- ಶ್ರೀಮತಿ ಉಷಾರಾಣಿ, ಹಿರಿಯ ಆರೋಗ್ಯ ಪರಿವೀಕ್ಷಕರು, ವಿ. ನಾಗೇನಹಳ್ಳಿ.
- ಶ್ರೀ. ಶಿವನಾಯಕ್, ಕಿರಿಯ ಆರೋಗ್ಯ ಪರಿವೀಕ್ಷಕರು, ಘನತ್ಯಾಜ್ಯ
- ಶ್ರೀ. ವಿನೋದ್, ಕಂದಾಯ ವಸೂಲಿಗಾರರು
- ಶ್ರೀ. ಗೋಪಾಲ ಕೃಷ್ಣಮೂರ್ತಿ, ಪೋಲೀಸ್ ಕಾನ್ಸ್ಟೇಬಲ್, ಹೆಬ್ಬಾಳ
- ಶ್ರೀ ಲಾಜರ್, ಬಿಡ್ಲ್ಯೂಎಸ್ಎಸ್‌ಬಿ ಪರಿವೀಕ್ಷಕರು
- ಶ್ರೀ ಅನಿಲ್, ಬಿಡ್ಲ್ಯೂಎಸ್ಎಸ್‌ಬಿ (ಎಂ ಆರ್)
- ಶ್ರೀ. ಡೇವಿಡ್ ಫರ್ನಾಡಿಸ್, ವಸತಿ ಸೇವಾಭಿವೃದ್ಧಿ ಸಂಘ ಸದಸ್ಯರು
- ಶ್ರೀ. ಕಾರ್ತಿಕ್, ವಸತಿ ಸೇವಾಭಿವೃದ್ಧಿ ಸಂಘ ಸದಸ್ಯರು
- ಶ್ರೀ. ಅಂಜಾದ್ ಅಹ್ಮದ್, ನಾಗರೀಕರು
- ಶ್ರೀ. ಉದಯ್ ಚಂದನ್, ಕೆ.ಆರ್.ಡ್ಲ್ಯೂ.ಎ ಸದಸ್ಯರು
- ಶ್ರೀ ಚಂದ್ ಪಾಷ, ನಾಗರೀಕರು
- ಶ್ರೀ. ಕಲಿಂ ರೆಹಮಾನ್, ನಾಗರೀಕರು
- ಶ್ರೀ. ವೆಂಕಟೇಶ್ ಡಿ ನಾಗರೀಕರು

ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಮಿತಿ ಕಾಯದರ್ಶಿಗಳಾದ ಶ್ರೀ. ಗುರುಸಿದ್ದಪ್ಪ .ಜಿ ರವರು ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ವಾರ್ಡ್ ಸಮಿತಿಯ ಸದಸ್ಯರುಗಳು ಹಾಗೂ ವಾರ್ಡ್ ಸಂಖ್ಯೆ 22ರ ನಾಗರೀಕರು ಹಾಗೂ ಎಲ್ಲಾ ವೃಂದದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು.

ಶ್ರೀ. ರಾಮಕೃಷ್ಣರೆಡ್ಡಿ, ನೋಡಲ್ ಅಧಿಕಾರಿಗಳು ಸಭೆಗೆ ಹಾಜರಿದ್ದ ಅಧಿಕಾರಿ ಹಾಗೂ ಸದಸ್ಯರನ್ನು ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು, ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು. ಹಾಗೂ ಕಮಿಟಿ ಕಾರ್ಯದರ್ಶಿಗಳು ಮಾತನಾಡುತ್ತಾ ದಿನಾಂಕ: 05/12/2020 ರಂದು ನಡೆದ ವಾರ್ಡ್ ಸಮಿತಿಯ ನಡವಳಿಗಳನ್ನು ಪುನರಾವಲೊಕನ ಮಾಡಲಾಯಿತು. ಹಿಂದಿನ ಸಭೆಯಲ್ಲಿ ತೆಗೆದುಕೊಂಡಿದ್ದ ತೀರ್ಮಾನಗಳನ್ನು ಕುರಿತು ಈ ದಿನಾಂಕದವರೆಗೆ ನಿರ್ವಹಿಸಿದ ಕೆಲಸಗಳ ಬಗ್ಗೆ ಸದಸ್ಯರುಗಳಿಗೆ ತಿಳಿಸಲಾಯಿತು.

- ಸಭೆಗೆ ಹಾಜರಿದ್ದ ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಬರುವ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಲ್ಲಿನ ಕಸವನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.
- ವಾರ್ಡ್‌ನ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಮುಖ್ಯರಸ್ತೆಗಳು ಮತ್ತು ಅಡ್ಡರಸ್ತೆಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ. ಆದರೆ ಸಿಸಿಟಿವಿ ಕ್ಯಾಮೆರಾಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲವೆಂದು ಟ್ರಾಫಿಕ್ ಪೋಲೀಸ್ ಇಲಾಖೆಯವರಿಗೆ ನೋಟೀಸ್ ನೀಡುವಂತೆ ತಿಳಿಸಿದರು.
- ಶ್ರೀ ಮಂಜುನಾಥ್, ನಾಗರೀಕರು ಮಾತನಾಡುತ್ತಾ, ವಾರ್ಡಿನಲ್ಲಿರುವ ಸಿಐಎಲ್ ಲೇಔಟ್‌ನಲ್ಲಿ ಬಿಡ್ಬ್ಲ್ಯೂಎಸ್‌ಎಸ್‌ಬಿ ಇಲಾಖೆ ರವರು ನೀರು ಸರಬರಾಜಿನ ಗುಂಡಿಗಳನ್ನು ಅನಧಿಕೃತವಾಗಿ ರಸ್ತೆಯಲ್ಲಿ ಅಗೆದಿರುವುದರಿಂದ ಕೂಡಲೇ ಬಿಡ್ಬ್ಲ್ಯೂಎಸ್‌ಎಸ್‌ಬಿ ಇಲಾಖೆಯವರಿಗೆ ದಂಡ ಹಾಕಬೇಕೆಂದು ನೋಡೆಲ್ ಅಧಿಕಾರಿಗಳಿಗೆ ತಿಳಿಸಿದರು. ಹಾಗೂ ರಸ್ತೆಗಳಲ್ಲಿರುವ ಎಲೆಕ್ಟ್ರಿಕ್‌ಪೋಲ್‌ಗಳನ್ನು ಬೇರೆಕಡೆ ಸ್ಥಳಾಂತರಿಸುವಂತೆ ದೂರನ್ನು ನೀಡುವ ಬಗ್ಗೆ ನೋಡೆಲ್ ಅಧಿಕಾರಿಗಳಿಗೆ ತಿಳಿಸಿದರು.
- ಶ್ರೀ ಗುರುಸಿದ್ದಪ್ಪ .ಜಿ ಸಹಾಯಕ ಅಭಿಯಂತರರು ರವರು ಮಾತನಾಡುತ್ತಾ ಕನಕನಗರದ 7ನೇ ಕ್ರಾಸ್ ನಿಂದ 1ನೇ ಕ್ರಾಸ್‌ನ ವರೆಗೆ ರಸ್ತೆ ಡಾಂಬರೀಕರಣವನ್ನು ಮಾಡುತ್ತಿರುವ ಬಗ್ಗೆ ನೋಡೆಲ್ ಅಧಿಕಾರಿಗಳ

ಬಗ್ಗೆ ತಿಳಿಸಿದರು. ಹಾಗೂ ಜಿಯೋ ಕೈಬಲ್ ವೈಯರ್ ಹಾಕಲೆಂದು ಅನಧಿಕೃತವಾಗಿ ರಸ್ತೆಯನ್ನು ಅಗೆದಿದ್ದು, ಅದಕ್ಕೆ ಸಂಬಂಧ ವ್ಯಕ್ತಿಗಳ ಮೇಲೆ ಕ್ರಮ ಜಾರುಗಿಸಲಾಗಿದೆ ಎಂದು ಹೇಳಿದರು.

- ಹಾಗೂ ಕನಕಾನಗರದ 17ನೇ, 18ನೇ ಮತ್ತು 19ನೇ ಕ್ರಾಸ್ ರಸ್ತೆಗಳ ಕಾಮಗಾರಿಯನ್ನು ದುರಸ್ಥಿ ಪಡಿಸುವ ಬಗ್ಗೆ ತಿಳಿಸಿದರು.

- ಶ್ರೀ. ಡೇವಿಡ್ ಫೆರ್ನಾಡಿಸ್, ವಸತಿ ಸೇವಾಭಿವೃದ್ಧಿ ಸಂಘ ಸದಸ್ಯರು ಮಾತನಾಡುತ್ತಾ, ವಾರ್ಡ್‌ನ ವ್ಯಾಪ್ತಿಯಲ್ಲಿರುವ ಸನ್‌ರೈಸ್ ಕಾಲೋನಿ ಮತ್ತು ಸಿಐಎಲ್ ಲೇಔಟ್‌ನಲ್ಲಿರುವ debrisಗಳನ್ನು ಸರಿಪಡಿಸುವಂತೆ ನೋಡೆಲ್ ಅಧಿಕಾರಿಗಳಿಗೆ ತಿಳಿಸಿದರು. ಅದಕ್ಕೆ ಪ್ರತಿಯಾಗಿ ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ ಶೀಘ್ರದಲ್ಲಿ ರಸ್ತೆಗಳಲ್ಲಿರುವ debris ಗಳನ್ನು ಸರಿಪಡಿಸುವಂತೆ ಹೇಳಿದರು.

- ಶ್ರೀಮತಿ ಉಷಾರಾಣಿ, ಹಿರಿಯ ಆರೋಗ್ಯ ಪರಿವೀಕ್ಷಕರು, ರವರು ಮಾತನಾಡುತ್ತಾ ವಾರ್ಡ್‌ನಲ್ಲಿರುವ ಆರೋಗ್ಯ ಕೇಂದ್ರದಲ್ಲಿ ಕೋವಿಡ್-19 ಬಗ್ಗೆ ಮರುಪರಿಶೀಲನೆ ಮಾಡಲಾಗಿದೆ ಎಂದು ತಿಳಿಸಿದರು ಹಾಗೂ ವಾರ್ಡ್‌ನಲ್ಲಿ ದಿನಕ್ಕೆ ಸರಾಸರಿ 200 ಕೋವಿಡ್-19 ಪರೀಕ್ಷೆಗಳನ್ನು ನಡೆಯುತ್ತಿದ್ದು, ಮತ್ತು ಒಂದೇ ದಿನದಲ್ಲಿ ಕೊವಿಡ್-19 ಪರೀಕ್ಷೆ ಫಲಿತಾಂಶವನ್ನು ನೀಡುತ್ತೀರುವ ಬಗ್ಗೆ ನೋಡೆಲ್ ಅಧಿಕಾರಿಗಳಿಗೆ ತಿಳಿಸಿದರು.

- ಹಾಗೂ ಯಾವುದಾದರೂ ಒಬ್ಬ ವ್ಯಕ್ತಿಗೆ ಕೋವಿಡ್ ಲಕ್ಷಣ ಕಂಡುಬಂದಲ್ಲಿ ಆ ವ್ಯಕ್ತಿಗೆ ಐಸೋಲೇಷನ್ ಅಥವಾ ಟ್ಯಾಬ್ಲೆಟ್‌ಗಳನ್ನು ನೀಡುವುದಾಗಿ ತಿಳಿಸಿದರು. ಹಾಗೂ ಯಾವುದೇ ಸಮಸ್ಯೆ ಇಲ್ಲವೆಂದು ಹೇಳಿದರು.

- ಶ್ರೀ ಚಂದ್ ಪಾಷ, ನಾಗರೀಕರು ಮಾತನಾಡುತ್ತಾ, ಕನಕನಗರದ 7ನೇ ಕ್ರಾಸ್ ಮತ್ತು 17ನೇ ಕ್ರಾಸ್‌ನ ರಸ್ತೆಗಳಲ್ಲಿ 75%ರಷ್ಟು ಒಣ ಮರಗಳಿರುವುದರಿಂದ ಅದನ್ನು ತೆರವುಗೊಳಿಸುವಂತೆ ಅರಣ್ಯ ಇಲಾಖೆಯವರಿಗೆ ನೋಟಿಸ್ ನೀಡಬೇಕೆಂದು ನೋಡೆಲ್ ಅಧಿಕಾರಿಗಳಿಗೆ ತಿಳಿಸಿದರು.

- ಶ್ರೀ ಅಂಜಾದ್ ಅಹ್ಮದ್ ನಾಗರೀಕರು ಮಾತನಾಡುತ್ತಾ, ಕನಕನಗರದ 2ನೇ'ಎ',ಕ್ರಾಸ್‌ನಲ್ಲಿರುವ street light pollನ್ನು ಬೇರೆ ಕಡೆಗೆ ಸ್ಥಳಾಂತರಿಸುವಂತೆ ತಿಳಿಸಿದರು. ಅದಕ್ಕೆ ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸಿ ಸರಿಪಡಿಸುವುದಾಗಿ ಹೇಳಿದರು.

- ಶ್ರೀ ಕಲೀಲ್ ರೆಹಮಾನ್ ನಾಗರೀಕರು ಮಾತನಾಡುತ್ತಾ, ಕನಕನಗರದ 10ನೇ ಕ್ರಾಸ್ ಪೆಟ್ರೋಲ್ ಬಂಕ್ ಮುಂಭಾಗದ ರಸ್ತೆಯಲ್ಲಿ overload pollನ್ನು ಬದಲಾಯಿಸುವ ಬಗ್ಗೆ ತಿಳಿಸಿದರು.

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯವನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಿಸಿದ ಅಧಿಕಾರಿಗಳು ಕೈಗೊಂಡ ಕ್ರಮದ ಬಗ್ಗೆ ವರದಿ ಪೂರ್ಣಗೊಂಡ ಭಾವಚಿತ್ರ ಹಾಗೂ ಲಿಖಿತ ವರದಿ ತಯಾರಿಸಿಕೊಂಡು ಹಾಜರಾಗಲು ಸೂಚಿಸಿ ಹಾಗೂ ಹಾಜರಾಗದೇ

ಇರುವ ಅಧಿಕಾರಿಗಳು ಮುಂದಿನ ಸಭೆಯಲ್ಲಿ ಹಾಜರಾಗಿರಬೇಕೆಂದು ಸೂಚಿಸಿದರು. ಸಭೆಯನ್ನು ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮಿತಿ ಕಾರ್ಯದರ್ಶಿಗಳಾದ ಗುರುಸಿದ್ದಪ್ಪ .ಜಿ ರವರ ವಂದನಾರ್ಪಣೆಯೊಂದಿಗೆ ಮದ್ಯಾಹ್ನ 12:00ಕ್ಕೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ ರಾಮಕೃಷ್ಣರೆಡ್ಡಿ)
ವಾರ್ಡ್ ಸಮಿತಿ ಅಧ್ಯಕ್ಷರು

(ಗುರುಸಿದ್ದಪ್ಪ .ಜಿ)
ವಾರ್ಡ್ ಸಮಿತಿ ಕಾರ್ಯದರ್ಶಿ
ಮತ್ತು
ಸಹಾಯಕ ಅಭಿಯಂತರರು ವಾರ್ಡ್ ನಂ:22